


ಚಿಂತಾಮಣಿ ಕೊಡ್ಲೆಕೆರೆ

# ತಾಯನುಡಿ

**ಕೃಷ್ಣೆಯಾಚೆಯಿಂದ** ಬಸಪ್ಪಣ್ಣ, ಕಮಲ ಬಂದರು
ಬುತ್ತಿಯಲ್ಲಿ ರೊಟ್ಟಿ, ಪುಂಡಿಪಲ್ಯ, ಖಾರ ತಂದರು
ಭುವನೇಶ್ವರಿ ಅಮ್ಮನೆದುರು ಬುತ್ತಿಯಿಟ್ಟು ನಿಂದರು
ಜಯ ಕನ್ನಡನಾಡಿನವ್ವ ಜಯವಾಗಲಿ ಎಂದರು

ತುಂಗಾನದಿಯೀಚೆಯಿಂದ ಮಾನು, ರತ್ನ ಬಂದರು
ಬುತ್ತಿಯಲ್ಲಿ ಅಕ್ಕಿರೊಟ್ಟಿ, ಕಾಯಿಚಟ್ನಿ ತಂದರು
ಭುವನೇಶ್ವರಿ ಅಮ್ಮನೆದುರು ಬುತ್ತಿಯಿಟ್ಟು ನಿಂದರು
ಜಯ ಕನ್ನಡನಾಡಿನರಸಿ ಜಯವಾಗಲಿ ಎಂದರು

ಕಾವೇರಿಯ ಮಡಿಲಿನಿಂದ ಭೈರ, ರಂಗಿ ಬಂದರು
ಬುತ್ತಿಯಲ್ಲಿ ರಾಗಿಮುದ್ದೆ, ಬಸ್ಸಾರು ತಂದರು
ಭುವನೇಶ್ವರಿ ಅಮ್ಮನೆದುರು ಬುತ್ತಿಯಿಟ್ಟು ನಿಂದರು
ಜಯ ಕನ್ನಡನಾಡರಾಣಿ ಜಯವಾಗಲಿ ಎಂದರು

ಕರಾವಳಿಯ ತಗ್ಗಿನಿಂದ ಮಂಜು, ದುರ್ಗಿ ಬಂದರು
ಬುತ್ತಿಯಲ್ಲಿ ಅಂಬಲಿ, ದೋಸೆ ಬೆಲ್ಲ ತಂದರು
ಭುವನೇಶ್ವರಿ ಅಮ್ಮನೆದುರು ಬುತ್ತಿಯಿಟ್ಟು ನಿಂದರು
ಜಯ ಕನ್ನಡನಾಡದೇವಿ ಜಯವಾಗಲಿ ಎಂದರು

ಅಮ್ಮ ನಕ್ಕು ನುಡಿದಳು: 'ಮುದ್ದೆ! ರೊಟ್ಟಿ! ಪತ್ರೊಡೆ!
ಕರದಂಟು! ಪುಳಿಯೋಗರೆ! ಎಲ್ಲ ದಿವ್ಯವಾಗಿವೆ!
ಎಲ್ಲ ಸೊಗಸು, ರುಚಿಗಳಿರಲಿ, ಬರಲಿ ನಿಮ್ಮ ತಟ್ಟೆಗೆ
ಅಣ್ಣ, ಅಕ್ಕ, ತಮ್ಮ, ತಂಗಿ ಬಾಳಿರೆಲ್ಲ ಒಟ್ಟಿಗೆ'

